1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ

ಸಿ.ಸಿ. ನಂ. 26970-2023

ಸಿಡಬ್ಲೂ -13 ಪಿಡಬ್ಲೂ-4

ಸಾಕ್ಷಿದಾರರ ಹೆಸರು : ಶ್ರೀಧರ ಕೆ ಕೆ
ತಂದೆಯ ಹೆಸರು : ಕರಿಯಪ್ಪ
ವಯಸ್ಸು : 54 ವರ್ಷ
ಕೆಲಸ : ಪಿಐ, ಸಿಐಡಿ ಬೆಂಗಳೂರು
ವಾಸ : ಬೆಂಗಳೂರು

ಸಾಕ್ಷಿಯನ್ನು ದಿನಾಂಕಃ 09-10-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನಾನು ಜನೇವರಿ 2023 ರಿಂದ ಇಲ್ಲಿಯವರೆಗೆ ಸಿಐಡಿ ಸಿಸಿಪಿಎಸ್ ನಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದ ಕಡತವನ್ನು ಚಾಸಾ 12 ರವರಿಂದ ದಿ. 03-02-2023 ರಂದು ಸ್ವೀಕರಿಸಿ ತನಿಖೆಯನ್ನು ಮದುವರಿಸಿರುತ್ತೇನೆ. ದಿ. 15-05-2023 ರಂದು ಎಫ್ ಎಸ್ ಎಲ್ ಹೈದರಾಬಾದ್ ಗೆ ಕಳುಹಿಸಲಾಗಿದ್ದ ಚಾಸಾ 9 ರವರು ಹಾಜರುಪಡಿಸಿದ ಸ್ವತ್ತುಗಳನ್ನು ವರದಿಯೊಂದಿಗೆ ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸಾಕ್ಷಿಯು ಸದರಿ ಸ್ವತ್ತುಗಳನ್ನು ಒಂದು ಹಾರ್ಡ ಡಿಸ್ಕ, ಒಂದು ವೋಡಾ ಫೋನ್ ಸೀಮ್ ಸಹಿತವಾದ ರೆಡ್ ಮೀ ಮೊಬೈಲ್, ಒಂದು ಪೆನ್ ಡ್ರೈವ್ ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು. ಮಾ1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಎಫ್ ಎಸ್ ಎಲ್ ವರದಿ ಜೊತೆಯಲ್ಲಿ ಅದರ ಮಾಹಿತಿಯುಳ್ಳ ಒಂದು ಪೆನ್ ಡ್ರೈವ್ ನ್ನು ಸ್ವೀಕರಿಸದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 5 ಎಂದು ಗುರುತಿಸಲಾಯಿತು.

ದಿ. 15-09-2023 ರಂದು ಆರೋಪಿಯು ಉಪಯೋಗಿಸುತ್ತಿದ್ದ ಮೊಬೈಲ್ ನಂ. 9160433084 ಮತ್ತು ದೂರುದಾರರು ಉಪಯೋಗಿಸಿದ್ದ ಮೊಬೈಲ್ ಸಂಖ್ಯೆ 9642429094 ಗಳಿಗೆ ಸಂಬಂಧಿಸಿದಂತೆ ವೋಡಾ ಫೋನ್ ಅರವರಿಂದ ನಿಪಿ. 2 ನ್ನು ಸ್ವೀಕರಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಕಲಂ. 65 (ಬಿ ) ಪ್ರಮಾಣ ಪತ್ರ ನಿಪಿ.3 ನ್ನು

ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ. 2 ಮತ್ತು 3 ನ್ನು ನೋಡಿ ಗುರುತಿಸಿರುತ್ತಾರೆ. ನಿಪಿ. 3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 3 ಎ ಎಂದು ಗುರುತಿಸಲಾಯಿತು.

ನಂತರ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ್ದಿದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

Inspite of direction Accused has not called his counsel hence, cross taken as closed.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ